sdmimd

Vijaya Karnataka (Namma Mysuru)

**Date:** Dec 05, 2015 **Page No.** 02

**Edition:** Mysore **Language: Kannada**

### ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಇನ್ಫೋಸಿಸ್‌ನ ರಿಚರ್ಡ್ ಲೋಬೋ

# ಮಾನವ ಸಂಪನ್ಮೂಲ ನಿರ್ವಹಣೆಯೇ ಸವಾಲು

■ **ವಿಕ ಸುದ್ದಿಲೋಕ,** ಮೈಸೂರು

ಭಾರತದಲ್ಲಿ ಮಾನವ ಸಂಪನ್ಮೂಲವನ್ನು ನಿರ್ವಹಿಸುವ ದೊಡ್ಡ ಹೊಣೆಯೇ ಇದ್ದು, ಇದಕ್ಕಾಗಿ ಹಲವಾರು ಬದಲಾವಣೆಗಳನ್ನು ಕಾಲ ಕಾಲಕ್ಕೆ ಮಾಡಿಕೊಳ್ಳಬೇಕಾಗಿದೆ ಎಂದು ಇನ್ಫೋಸಿಸ್ ಮಾನವ ಸಂಪನ್ಮೂಲ ವಿಭಾಗದ ಹಿರಿಯ ಉಪಾಧ್ಯಕ್ಷ ರಿಚರ್ಡ್ ಲೋಬೋ ಸಲಹೆ ನೀಡಿದರು.

ಚಾಮುಂಡಿಬೆಟ್ಟತಪ್ಪಲಿನ ಎಸ್‌ಡಿಎಂ ಐಎಂಡಿ ಸಂಸ್ಥೆಯಲ್ಲಿ ಶುಕ್ರವಾರ ಆರಂಭಗೊಂಡ 'ಕಾರ್ಯಸ್ಥಳದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ' ಕುರಿತ ಎರಡು ದಿನದ ನಾಲ್ಕನೇ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ''ಸದ್ಯದ ಸನ್ನಿವೇಶದಲ್ಲಿ ಮಾನವ ಸಂಪನ್ಮೂಲವನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವ ಸನ್ನಿವೇಶವಿದೆ. ಇದಕ್ಕಾಗಿ ಮಾನವ ಸಂಪನ್ಮೂಲ ವಿಭಾಗ ತಂತ್ರಜ್ಞಾನ ಹಾಗೂ ನಾವೀನ್ಯತೆಯಲ್ಲಿ ಸವಾಲುಗಳನ್ನು ಎದುರಿಸುತ್ತಿದೆ. ಸಹಸ್ರಾರು ಉದ್ಯೋಗಿಗಳನ್ನು ನಿರ್ವಹಿಸುವಲ್ಲಿ ಎದುರಾಗುತ್ತಿರುವ ಸವಾಲುಗಳು ಹಾಗೂ ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಖಾಸಗಿ ಜಾಲಗಳ ಪಾತ್ರದ ಬಗ್ಗೆಯೂ ಗಮನ ಹರಿಸಬೇಕಾಗಿದೆ'' ಎಂದರು.

ಸಮ್ಮೇಳನದ ಮುಖ್ಯಸ್ಥ ಡಾ. ಮೌಶುಮಿ ಸೇನ್ ಗುಪ್ತ ಮಾತನಾಡಿ, ''ಮಾನವ ಸಂಪನ್ಮೂಲ ನಿರ್ವಹಣಾ ಕ್ಷೇತ್ರವು ಇಂದಿನ ಉದ್ಯಮಗಳಲ್ಲಿ ಸಹಯೋಗಿಯ ಪಾತ್ರವನ್ನು ನಿರ್ವಹಿಸಬೇಕು'' ಎಂದರು.

ಎಸ್‌ಡಿಎಂಐಎಂಡಿ ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಸಮ್ಮೇಳನದ ಉಪಮುಖ್ಯಸ್ಥ ಡಾ. ನೀಲಂಜನ್ ಸೇನ್ ಗುಪ್ತ ಸಮ್ಮೇಳನದಲ್ಲಿ ಹಾಜರಿದ್ದರು.

ನಂತರ ನಾನಾ ದೇಶಗಳಿಂದ ಆಗಮಿಸಿರುವ ಉದ್ಯಮಿಗಳು, ಶಿಕ್ಷಣ ತಜ್ಞರೊಂದಿಗೆ ಸಂವಾದಗಳು ನಡೆದವು. ಮಾನವ ರೂಪದ ಬಂಡವಾಳ ನಿರ್ವಹಣೆ, ಭಾವನಾತ್ಮಕ ಬುದ್ಧಿವಂತಿಕೆ, ಮಾನವ ಸಂಪನ್ಮೂಲ ಸಂರಕ್ಷಣೆ, ಹಸಿರು ಮಾನವ ಸಂಪನ್ಮೂಲ ನಿರ್ವಹಣೆ, ಮಾನವ ಸಂಪನ್ಮೂಲ ವಿಶ್ಲೇಷಣೆ, ಸಾಮರ್ಥ್ಯ ನಕ್ಷೆ, ಮಾನವ ಸಂಪನ್ಮೂಲ ಲೆಕ್ಕ ಪರಿಶೋಧನೆ, ಪ್ರತಿಭಾ ನಿರ್ವಹಣೆ ಸೇರಿದಂತೆ ಇತರ ವಿಷಯಗಳ ಬಗ್ಗೆ ವಿಚಾರ ವಿಮರ್ಶೆ, ವಿನಿಮಯ ನಡೆದವು. 250ಕ್ಕೂ ಹೆಚ್ಚು ಶಿಕ್ಷಣ ತಜ್ಞರು ಮತ್ತು ಮಾನವ ಸಂಪನ್ಮೂಲ ಅಭ್ಯಾಸ ನಿರತರು ಭಾರತ, ಬಾಂಗ್ಲಾದೇಶ, ಇರಾನ್, ಮಾಲ್ಡೀವ್ಸ್, ನೈಜೀರಿಯಾ, ಶ್ರೀಲಂಕಾ, ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.

ವಿಕ ಚಿತ್ರಲೋಕ



**ಮೈಸೂರಿನ ಎಸ್‌ಡಿಎಂ ಐಎಂಡಿ ಸಂಸ್ಥೆಯಲ್ಲಿ ಶುಕ್ರವಾರ ಆರಂಭಗೊಂಡ 'ಕಾರ್ಯಸ್ಥಳದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ' ಕುರಿತ ಎರಡು ದಿನದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಇನ್ಫೋಸಿಸ್ ಹಿರಿಯ ಉಪಾಧ್ಯಕ್ಷ ರಿಚರ್ಡ್ ಲೋಬೋ ಮಾತನಾಡಿದರು.**